**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ**

**ಆಳಂದ**

ಸಿ.ಸಿ, ನಂಬರ 9737/2021 ಸಿ.ಡಬ್ಲೂ.11 ಪಿ.ಡಬ್ಲೂ.7

| | |
|---|---|
| ಹೆಸರು | ಡಾ. ಶಶಾಂಕ |
| ತಂದೆ/ಗಂಡ | ಶ್ರೀಕಾಂತ |
| ವಯಸ್ಸು | 28 ವರ್ಷ |
| ಉದ್ಯೋಗ | ವೈದ್ಯರು |
| ವಾಸಸ್ಥಳ | ಗುಲಬರ್ಗಾ |

ದಿನಾಂಕ 04-04-2026
ಸತ್ಯ ಪ್ರತಿಜ್ಞೆಯ ಮೇರೆಗೆ

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:**

ನಾನು ಜುಲೈ 2021 ರಿಂದ ನವೇಂಬರ 2021 ರವರೆಗೆ ಮಾದನಹಿಪ್ಪರಗಾ ಸಮುದಾಯ ಆರೋಗ್ಯ ಕೇಂದ್ರದಲ್ಲಿ ವೈದ್ಯಧಿಕಾರಿ ಅಂತಾ ಕೆಲಸ ಮಾಡಿರುತ್ತೇನೆ.

ದಿಃ 24-08-2021 ರಂದು ಚಾಸ-1 ರವರು ಮ. 01.30 ಗಂಟೆಗೆ ಹಲ್ಲೆಯ ಹಿನ್ನಲೆಯ ಮೇಲೆ ಆಸ್ಪತ್ರೆಗೆ ಬಂದಿದ್ದರು.ಅವರನ್ನು ಪರೀಕ್ಷಿಸಿ ನೋಡಿದಾಗ ಡಿಪ್ರೇಸಡ್ ಫ್ರಂಟಲ್ ಬೋನ ಓವರ ದ ಹೇಡ್ ಆ್ಯಟ್ ರೈಟ್ ಸೈಡ್ ವಿಥ್ ನ್ಯೂಮೋಕೆಫೋಲಸ್ ಆಗಿತ್ತು ಮತ್ತು ಫ್ರಾಕ್ಚರ ಆಫ್ ರಾಯಮಫಸ ಮ್ಯಾಂಡಿಬಲ್ ಆನ ದಿ ಲೆಫ್ಟ ಸೈಡ್ ಅಂತಾ ಕಂಡು ಬಂದಿತ್ತು. ನನ್ನ ಪ್ರಕಾರ ಸದರಿ ಗಾಯಗಳು ತೀವ್ರ ಸ್ವರೂಪದ ಗಾಯ ಇರುತ್ತದೆ ಎಂದು ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ.

ಸಾಕ್ಷಿಯು ನಿಪಿ. 5 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 5ಎ ಅಂತಾ ಗುರುತಿಸಲಾಯಿತು.

ಪಾಟೀ ಸವಾಲುಃಆರೋಪಿತರ ಪರಃ ಶ್ರೀ.ಎಮ. ವಿ. ಇ. ವಕೀಲರಿಂದ:

ನಾನು ಚಾಸಾ 1 ರವರನ್ನು 1.30 ರಿಂದ 2.00 ಗಂಟೆಯವರೆಗೆ ಚಿಕಿತ್ಸೆ ನೀಡಿರುತ್ತೇನೆ. ನಿಪಿ. 5 ರಲ್ಲಿ ಸಮಯವು 11.30 A.M ಅಂತಾ ಇದಿದ್ದು ತಿದ್ದು ಪಡಿ ಆಗಿರುತ್ತದೆ ಎಂದರೆ ಸರಿ. 12.00 P.M ಇದಿದ್ದು 02.00 P.M ತಿದ್ದು ಪಡಿ ಆಗಿದೆ ಎಂದರೆ ಸರಿ. ನಿಪಿ. 5 ರಲ್ಲಿ ಗುರುತಿನ ಚಿಹ್ನೆಗಳನ್ನು ವೈದ್ಯಕೀಯ ನ್ಯಾಯ ಶಾಸ್ತ್ರದ ಪ್ರಕಾರ ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ. 5 ರಲ್ಲಿ ಫ್ರಾಕ್ಚರ ಎಂದು ನಮೂದಿಸಿದ್ದು ಅದನ್ನು ಕಣ್ಣಿನಿಂದ ನೋಡದೇ ಹೇಳಲು ಬರುವುದಿಲ್ಲ X-ray ಅವಶ್ಯಕತೆ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು C.T ವರದಿಯನ್ನು ತೆಗೆದುಕೊಂಡು ಬಂದಿದ್ದರು ಅಂತಾ ನುಡಿಯುತ್ತಾರೆ. ನಿಪಿ. 5 ರಲ್ಲಿ C.T. ವರದಿಯ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ ಮತ್ತು ಸದರಿ ವರದಿಯನ್ನು ಯಾವ ವೈದ್ಯರು ನೀಡಿದ್ದರು ಅಂತಾ ನಮೂದು ಇಲ್ಲ ಎಂದರೆ ಸರಿ. ಚಾಸಾ 1 ರವರ ಜೊತೆಗೆ ಆಸ್ಪತ್ರೆಗೆ ಯಾರು ಬಂದಿದ್ದರು ಅಂತಾ ಹೇಳಲು ನೆನಪು ಇಲ್ಲ. ಚಾಸಾ 1 ರವರು ನೆರವಾಗಿ ಆಸ್ಪತ್ರೆಗೆ ಬಂದಿದ್ದರು ಪೋಲಿಸರು ಕಳುಹಿಸಿರಲಿಲ್ಲ. ನಿಪಿ. 5 ರಲ್ಲಿ P.C/H.C-1182 ಅಂತಾ ನಮೂದು ಇದ್ದು ಅವರ ಹೆಸರು

ನನಗೆ ಹೇಳಲು ಬರುವುದಿಲ್ಲ. ನಾವು ಪೋಲಿಸರಿಗೆ ಎಮಎಲಸಿ ಮಾಹಿತಿ ಕಳುಹಿಸಿರಲಿಲ್ಲ. ಎಮಎಲಸಿ ದಾಖಲು ಮಾಡಿದರೇ ಗಾಯದ ಪ್ರಮಾಣ ಪತ್ರದಲ್ಲಿ ಎಮಎಲಸಿ ಸಂಖ್ಯೆ ನಮೂದು ಮಾಡುತ್ತಾರೆ ಎಂದರೆ ಸರಿ. ನಿಪಿ. 5 ರಲ್ಲಿ ನಮೂದಿಸಿದ ಗಾಯಗಳು ಸಾಮಾನ್ಯವಾಗಿ ಯಾವುದಾದರೂ ಗಟ್ಟಿಯಾದ ವಸ್ತುವಿನ ಮೇಲೆ ಬಿದ್ದಾಗ ಆಗುತ್ತದೆ ಎಂದರೆ ಸರಿ. ನಿಪಿ. 5 ರಲ್ಲಿ ಗಾಯದ ಸಮಯವನ್ನು ನಮೂದು ಮಾಡಿಲ್ಲ ಎಂದರೆ ಸರಿ. ಘಟನೆಯು 11.45 ಗಂಟೆಗೆ ಆಗಿದ್ದು ನಾನು 11.30 ಗಂಟೆಗೆ ಚಾಸಾ 1 ರವರು ಆಸ್ಪತ್ರೆಗೆ ಬಂದಿದ್ದು ಅಂತಾ ನಮೂದು ಮಾಡಿದ್ದು ನಂತರ ಪೋಲಿಸರು ಘಟನೆಯ ಸಮಯದ ಬಗ್ಗೆ ತಿಳಿಸಿದ ಕಾರಣ ನಾನು ನಿಪಿ. 5 ರಲ್ಲಿ ಸಮಯವನ್ನು ತಿದ್ದುಪಡಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದಿದ್ದರೂ ಸಹಿತ 11.30 ಗಂಟೆಗೆ ಪೋಲಿಸರು ನನ್ನ ಬಳಿ ಗಾಯದ ಪ್ರಮಾ ಣಪತ್ರವನ್ನು ತೆಗೆದುಕೊಂಡಿದ್ದು ಇದ್ದು ನಾನು ಪೋಲಿಸರಿಗೆ ಸಹಾಯ ಮಾಡಲು ಸುಳ್ಳು ದಾಖಲೆ ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಸಿ.ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ